# ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃರವರ ನ್ಯಾಯಾಲಯದಲ್ಲಿ, ನ.ರಾ.ಪುರ.

ಸಿಸಿ ನಂ **90/2025**

ಸಿ ಡಬ್ಲ್ಯೂಃ- **04**/ಪಿ ಡಬ್ಲ್ಯೂ ಃ-**04**

ಸಾಕ್ಷಿದಾರರ ಹೆಸರು ಃ ಕೆ.ಸಿ. ನಾಗೇಶ
ತಂದೆಯ ಹೆಸರು ಃ ಚಿನ್ನಪ್ಪ ಗೌಡ
ವಯಸ್ಸು ಃ **70** ವರ್ಷ
ಉದ್ಯೋಗ ಃ ರೈತ
ವಾಸಸ್ಥಳ ಃ ಆಲಂದೂರು

ದಿನಾಂಕಃ **08-06-2026** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.
ಮುಖ್ಯವಿಚಾರಣೆ ಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

1. ದಿಃ 25.03.2017 ರಂದು ಅಂತವಾನಿ ಹೊನ್ನೆಕುಡಿಗೆ ರಸ್ತೆಯಲ್ಲಿ ಚಂಡಿಕೇಶ್ವರಿ ದೇವಸ್ಥಾನದ ಬಳಿ ಭರತ್ ಹಾಗೂ ನಂದನ್ ಇವರ ಜೊತೆ ರೈಸ್ ಪುಲ್ಲಿಂಗ್ ವ್ಯವಹಾರದ ವಿಚಾರವಾಗಿ ಮಾತನಾಡಿದ ಸ್ಥಳವನ್ನು ಭರತ್ ಇವರು ತೋರಿಸಿದ್ದು, ನನ್ನ ಮತ್ತು ಮಹೇಶ ಇವರ ಸಮಕ್ಷಮ ಪೋಲಿಸರು ಸ್ಥಳ ಮಹಜರ್ ಅನ್ನು ಬೆಳಗ್ಗೆ 10.15 ರಿಂದ 11.30 ರ ಅವಧಿಯಲ್ಲಿ ಮಹಜರ್ ಮಾಡಿರುತ್ತಾರೆ. ಹಾಗೂ ಆ ಕಾಲಕ್ಕೆ ಸದರಿ ಸ್ಥಳದ ಭಾವಚಿತ್ರವನ್ನು ತೆಗೆದಿರುತ್ತಾರೆ.
2. ಸಾಕ್ಷಿಯು ದಿಃ 25.03.2017 ರಂದು ಮಾಡಿದ ಸ್ಥಳ ಮಹಜರ್ ಅನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿಯು ನಿಪಿ-2 ರಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಸದರಿಯವರ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯ ನಿಪಿ-2 ಅನ್ನು ಮಾಡುವ ಕಾಲಕ್ಕೆ ತೆಗೆದ ಭಾವಚಿತ್ರವನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-3 ಎಂದು ಗುರುತಿಸಲಾಗಿರುತ್ತದೆ.

(ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಕೋರಿಕೊಂಡಿದ್ದು, ಪರಿಗಣಿಸಿ ಅನುಮತಿ ನೀಡಲಾಯಿತು)

## ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

1. ಆ ದಿನ ಪೋಲಿಸರು ಮಹಜರ್ ಅನ್ನು ಬೆಳಗ್ಗೆ 10.30 ರಿಂದ 11.15 ರ ಅವಧಿಯಲ್ಲಿ ಜರುಗಿಸಿದ್ದರು ಎಂದರೆ ಸರಿ. ಮಹಜರ್ ಮಾಡು ವ ಪೂರ್ವದಲ್ಲಿ ನಾನು ಒಪ್ಪಿದ ಮೇರೆಗೆ ಪೋಲಿಸರು ನನಗೆ ನೋಟಿಸನ್ನು ನೀಡಿದ್ದರು ಎಂದರೆ ಸರಿ.

ಸಿಸಿ ನಂಃ **90/2025**
ಸಿ ಡಬ್ಲ್ಯೂಃ **04**/ಪಿ ಡಬ್ಲೂಃ **04**

ಪಾಟೀ ಸವಾಲುಃ ಆರೋಪಿ **1, 2** ಮತ್ತು **4** ರ ಪರ ಶ್ರೀ **KJP** ವಕೀಲರಿಂದಃ

1. ಚಾಸಾ 1 ಮತ್ತು ಚಾಸಾ 27 ನನ್ನ ದೂರದ ಸಂಬಂಧಿಕರು ಎಂದರೆ ಸರಿಯಲ್ಲ. ನಾನು ರೈತಾಪಿ ಕೆಲಸ ಮಾಡಿಕೊಂಡು ಇರುತ್ತೇನೆ. ನನಗೆ ಸೇರಿದ ಜಮೀನು ಹಾಲಂದೂರು ಗ್ರಾಮದಲ್ಲಿ ಬರುತ್ತದೆ. ಎನ್.ಆರ್.ಪುರದಿಂದ ನಮ್ಮ ಜಮೀನು 12 ½ ಕಿ.ಮೀ. ದೂರದಲ್ಲಿ ಇರುತ್ತದೆ. ನನಗೆ ತರೀ ಮತ್ತು ಭಾಗಾಯ್ತು ಜಮೀನು ಇರುತ್ತದೆ. ನಾನು ದಿನನಿತ್ಯ ತೋಟಕ್ಕೆ ಹೋಗುವುದು ಮತ್ತು ಕೆಲಸ ಮುಗಿಸಿ ಮನೆಗೆ ಬರುವುದು ಇರುತ್ತದೆ ಎಂದರೆ ಸರಿ. ನಾನು ಹೊನ್ನೆಕುಡಿಗೆಗೆ ಮರ ನೋಡುವ ಸಲುವಾಗಿ ಆ ದಿನ ಹೋಗುತ್ತಿದ್ದೇನು. ಆ ದಿನ ನಾನು ಹೊನ್ನೆಕುಡಿಗೆಗೆ ಆಚಾರ ಜೊತೆ ಹೋಗಿರಲಿಲ್ಲ, ನಾನೊಬ್ಬನೇ ಹೋಗಿದ್ದೇನು.
2. ಆ ದಿನ ಸ್ಥಳದಲ್ಲಿ 2-3 ಜನ ಪೋಲಿಸರು, ನಾನು, ಮಹೇಶ ಮತ್ತು ಭರತ ಇದ್ದೇವು, ಆದರೆ ಊರು ಮನೆಯವರು ಯಾರು ಇರಲಿಲ್ಲ. ಸದರಿ ಸ್ಥಳದ ಸುತ್ತ ಮುತ್ತ ಮತ್ತು ದಾರಿಯಲ್ಲಿ ಹೋಗುತ್ತ ಮನೆಗಳು ಇರುತ್ತವೆ ಎಂದರೆ ಸರಿ. ನಾನು ಬರವಣಿಗೆ ಮಾಡಿದ ದಾಖಲೆಗೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಮಹಜರ್ ಅನ್ನು ಯಾರು ಬರೆದಿರುತ್ತಾರೆ ಎಂದು ನನಗೆ ಅವರ ಹೆಸರು ಹೇಳಲಾಗುವುದಿಲ್ಲ, ಆದರೆ ರೈಸ್ ಪುಲ್ಲಿಂಗ್ ವ್ಯವಹಾರದ ಸಂಬಂಧ ಬರೆದಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ನನಗೆ ಈಗ ಮಹಜರ್ ನಲ್ಲಿ ಬರೆದ ವಿಚಾರಗಳನ್ನು ಕೂಲಂಕುಷವಾಗಿ ಹೇಳಲು ಆಗುವುದಿಲ್ಲ. ಮಹಜರ್ ನಲ್ಲಿ ನಾನು ಮತ್ತು ಮಹೇಶ ಸಹಿ ಮಾಡಿದ್ದು, ಉಳಿದವರು ಎಷ್ಟು ಜನ ಮತ್ತು ಯಾರು ಸಹಿ ಮಾಡಿರುತ್ತಾರೆ ಎಂದು ನನಗೆ ಈಗ ಹೇಳಲು ಆಗುವುದಿಲ್ಲ. ನನಗೆ ಸದರಿ ಸ್ಥಳದ ಸುತ್ತುಮುತ್ತಲೂ ಏನು ಇರುತ್ತದೆ ಎಂದು ಹೇಳಲಾಗುತ್ತದೆ. ಸದರಿ ಸ್ಥಳದ ದಕ್ಷಿಣಕ್ಕೆ ರಸ್ತೆ ಬರುತ್ತದೆ. ಉತ್ತರಕ್ಕೆ ದೇವಸ್ಥಾನ ಬರುತ್ತದೆ. ನಾವು ನಿಂತ ಸ್ಥಳದಿಂದ 50-100 ಮೀಟರ್ ಒಳಗೆ ದೇವಸ್ಥಾನ ಮತ್ತು ಮಣ್ಣಿನ ರಸ್ತೆ ಬರುತ್ತದೆ.
3. ಸದರಿ ಭಾವಚಿತ್ರವನ್ನು ಪೋಲಿಸರು ತೆಗೆದಿದ್ದು, ಆದರೆ ಅವರು ಯಾರು ಎಂದು ಹೇಳಲಾಗುವುದಿಲ್ಲ. ನನಗೆ ಪೋಲಿಸರು ಸ್ಥಳದಲ್ಲಿಯೇ ನೋಟಿಸನ್ನು ನೀಡಿರುತ್ತಾರೆ. ನಾನು ದೂರುದಾರರ ಸಂಬಂಧಿಕರಿದ್ದು, ಮಹಜರ್ ಗೆ ಪೋಲಿಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಪೋಲಿಸ್ ಠಾಣೆಯಲ್ಲಿ ಸಹಿ ಮಾಡಿದ ಕಾರಣ ಮಹಜರ್ ನಲ್ಲಿ ಬರೆದ ವಿಚಾರ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-3 ಭಾವಚಿತ್ರವನ್ನು ಈ ಕೇಸಿಗೊಸ್ಕರ ಸೃಷ್ಟಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-3 ಭಾವಚಿತ್ರದಲ್ಲಿ ಒಬ್ಬರೇ ಪೋಲಿಸರು ಕಂಡು ಬರುತ್ತಾರೆ ಎಂದರೆ ಸರಿ.

ಸಾಮಾನ್ಯವಾಗಿ ದೇವಸ್ಥಾನದ ಬಳಿ ಪೂಜೆ ಪುನಸ್ಕಾರ ನಡೆಯುತ್ತದೆ ಎಂದರೆ ಸರಿ. ಆ ದಿನ ದೇವಸ್ಥಾನಕ್ಕೆ ಎಷ್ಟು ಜನ ಬಂದಿದ್ದರು ಎಂದರೆ ಸಾಕ್ಷಿ ಯಾರು ಬಂದಿರಲಿಲ್ಲ ಎಂದು ಉತ್ತರಿಸಿರುತ್ತಾರೆ. ನನಗೆ ಪೋಲಿಸರು ನೋಟಿಸ ನೀಡಿರುವುದಿಲ್ಲ, ಮತ್ತು ನಾನು ಸ್ಥಳದಲ್ಲಿ ಯಾವುದೇ ಸಹಿಯನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-2 ರಲ್ಲಿ ಬರೆದ ವಿಚಾರಗಳ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಚಾಸಾ-1 ರವರಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನ ಸ್ಥಳದಲ್ಲಿ ಮಹೇಶ ಎನ್ನುವವರು ನನ್ನ ಸಮಕ್ಷಮ ಸಹಿ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆ ದಿನ ಅಂತವಾನಿಗೆ ಹೋಗುತ್ತಿರುವಾಗ ದಾರಿ ಮದ್ಯದಲ್ಲಿ ಪೋಲಿಸರು ಸಿಕ್ಕಿ ನನ್ನ ಸಮಕ್ಷಮ ಮಹಜರ್ ಮಾಡಿರುತ್ತಾರ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆ ದಿನ ಮರ ನೋಡಲು ಹೋಗುತ್ತಿದ್ದೆ ಎಂಬ ವಿಚಾರವನ್ನು ಪೋಲಿಸರಿಗೆ ಹೇಳಿರುವುದಿಲ್ಲ ಎಂದರೆ ಸರಿ. ನಾನು ಆ ದಿನ ಮರ ನೋಡಲು ಹೋಗುತ್ತಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ಚಾಸಾ-27 ಈ ದಿನ ನ್ಯಾಯಾಲಯಕ್ಕೆ ಒಟ್ಟಿಗೆ ಬಂದಿರುತ್ತೇವೆ ಎಂದರೆ ಸರಿಯಲ್ಲ. ನನಗೆ ಈ ಕೇಸಿನ ವಿಚಾರ ಗೊತ್ತಿಲ್ಲದೇ ಇದ್ದರೂ ಪೋಲಿಸರು ಈ ದಿನ ಹೇಳಿಕೊಟ್ಟ ರೀತಿ ನಾನು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಆರೋಪಿ **3** ಮತ್ತು **5** ರ ಪರ ವಕೀಲರು ಆರೋಪಿ **1** ರ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ತಮ್ಮ ಪಾಟೀ ಸವಾಲು ಎಂದು

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ.

ಸಾಕ್ಷಿದಾರರ ಸಹಿಃ